# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

*ಸಂಖ್ಯೆ: 9/2, 6 ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್,*
*ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001*

## ಅಧಿಸೂಚನೆ

### ವೈ/04/10, ದಿನಾಂಕ: 28.07.2015

### ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್) ವಿನಿಯಮಗಳು, 2015

***ಪೀಠಿಕೆ:***

ಆಯೋಗವು, ಕರಡು ಕ.ವಿ.ನಿ.ಆ. (ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್) ವಿನಿಯಮಗಳು, 2015ನ್ನು ಹೊರಡಿಸಿ, ಭಾಗಿದಾರರಿಂದ ಅನಿಸಿಕೆ / ಅಭಿಪ್ರಾಯ ಮತ್ತು ಸಲಹೆಗಳನ್ನು ಆಹ್ವಾನಿಸಿತ್ತು. ಆಯೋಗವು, ಈ ವಿಷಯದಲ್ಲಿ ದಿನಾಂಕ 19.02.2015ರಂದು ಸಾರ್ವಜನಿಕ ವಿಚಾರಣೆಯನ್ನೂ ಸಹ ನಡೆಸಿತ್ತು. ಭಾಗಿದಾರರ ಅನಿಸಿಕೆ, ಅಭಿಪ್ರಾಯ ಮತ್ತು ಸಲಹೆಗಳನ್ನು ಪರಿಗಣಿಸಿದ ನಂತರ, ಆಯೋಗವು, 2003ರ ವಿದ್ಯುಚ್ಛಕ್ತಿ ಅಧಿನಿಯಮದ (2003ರ ಕೇಂದ್ರ ಅಧಿನಿಯಮ 36) ಪರಿಚ್ಛೇದ 181ರ ಉಪಪರಿಚ್ಛೇದ (2)ರ ಖಂಡ (ಝಡ್‌ಪಿ)ದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ವಿನಿಯಮಗಳನ್ನು ಮಾಡುತ್ತದೆ:

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್) ವಿನಿಯಮಗಳು, 2015:**

**1. ಸಂಕ್ಷಿಪ್ತ ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭ.–**

(1) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್) ವಿನಿಯಮಗಳು, 2015 ಎಂದು ಕರೆಯತಕ್ಕದ್ದು.

(2) ಈ ವಿನಿಯಮಗಳು ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ವಿದ್ಯುತ್ ಸರಬರಾಜು ಪರವಾನಿಗೆದಾರರು ಅಥವಾ ಅವರ ಉತ್ತರಾಧಿಕಾರಿ ಘಟಕಗಳಿಗೆ ಅನ್ವಯಿಸತಕ್ಕದ್ದು.

(3) ಈ ವಿನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತವೆ.

**2. ಪರಿಭಾಷೆ.–**

ಈ ವಿನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(i) "ಅಧಿನಿಯಮ" ಎಂದರೆ, 2003ರ ವಿದ್ಯುಚ್ಛಕ್ತಿ ಅಧಿನಿಯಮ (2003ರ ಕೇಂದ್ರ ಅಧಿನಿಯಮ 36);

(ii) "ಮೂಲಾಧಾರ (ಬೇಸ್‌ಲೈನ್) ಮಾಹಿತಿ" ಎಂದರೆ, ಬೇಡಿಕೆ ಭಾಗದ ನಿರ್ವಹಣೆ (ಡಿಎಸ್‌ಎಮ್) ಕಾರ್ಯಕ್ರಮ ಆರಂಭವಾಗುವುದಕ್ಕೆ ಮುಂಚೆ, ಕಾರ್ಯಕ್ರಮದ ಪರಿಣಾಮವನ್ನು ನಿರ್ಧರಿಸುವುದಕ್ಕೋಸ್ಕರ ಒಂದು ಪ್ರಾರಂಭ ಬಿಂದು

ಒದಗಿಸುವ ಸಲುವಾಗಿ ಅನುಸೂಚಿತ ವರ್ಗ ಅಥವಾ ಪ್ರವರ್ಗದ ಗ್ರಾಹಕರಿಂದ ಅಥವಾ ಯಾವುದೇ ವಿತರಣಾ ಪ್ರದೇಶದಿಂದ ವಿದ್ಯುಚ್ಛಕ್ತಿ ಬಳಕೆ ಮತ್ತು / ಅಥವಾ ಬೇಡಿಕೆಗೆ ಸಂಬಂಧಿಸಿದ ಮಾಹಿತಿ;

(iii) "ಬ್ಯೂರೋ" ಎಂದರೆ 2001ರ ಇಂಧನ ಸಂರಕ್ಷಣೆ ಅಧಿನಿಯಮದ (2001ರ ಕೇಂದ್ರ ಅಧಿನಿಯಮ 52) ಪರಿಚ್ಛೇದ 3ರ ಉಪಪರಿಚ್ಛೇದ (1)ರಡಿಯಲ್ಲಿ ಸ್ಥಾಪಿತವಾದ ಇಂಧನ ದಕ್ಷತಾ ಬ್ಯೂರೋ (ಬಿಇಇ);

(iv) "ಆಯೋಗ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ;

(v) "ಡಿಎಸ್ಎಂ" ಎಂದರೆ ಬೇಡಿಕೆ ಭಾಗದ ನಿರ್ವಹಣೆ (ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್);

(vi) "ಎಸ್ಕಾಂ" ಎಂದರೆ ಕರ್ನಾಟಕ ರಾಜ್ಯದಲ್ಲಿ ತನ್ನ ಪರವಾನಿಗೆಯಲ್ಲಿ ಅನುಸೂಚಿಸಿದ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮಾಡಲು ಪರವಾನಿಗೆ ಪಡೆದ ಒಂದು ವಿದ್ಯುತ್ ಸರಬರಾಜು ಕಂಪನಿ

(vii) "ಮೌಲ್ಯನಿರ್ಣಯ, ಮಾಪನ ಮತ್ತು ಪರಿಶೀಲನೆ" ಎಂದರೆ ಡಿಎಸ್ಎಂ ಅಥವಾ ಇಂಧನ ದಕ್ಷತೆ ಕಾರ್ಯಕ್ರಮಗಳ ಕಾರ್ಯ ನಿರ್ವಹಣೆ ಅಥವಾ ಇತರೆ ಅಂಶಗಳು ಅಥವಾ ಅವುಗಳ ಮಾರುಕಟ್ಟೆ ಪರಿಸರಗಳ ಮೌಲ್ಯನಿರ್ಣಯ, ಮಾಪನ ಮತ್ತು ಪರಿಶೀಲನೆ ಮಾಡುವ ಚಟುವಟಿಕೆಗಳು;

(viii) "ಮೇಲ್ವಿಚಾರಣೆ ಮತ್ತು ವರದಿ" ಎಂದರೆ ವಿದ್ಯುತ್ ಸರಬರಾಜು ಪರವಾನಗಿದಾರನ ಡಿಎಸ್ಎಂ ಅಥವಾ ಇಂಧನ ದಕ್ಷತೆ ಕಾರ್ಯಕ್ರಮಗಳ ಪ್ರಗತಿಯ ಮೇಲ್ವಿಚಾರಣೆ ಮತ್ತು ಮೌಲ್ಯನಿರ್ಣಯ ಮಾಡುವ ಚಟುವಟಿಕೆಗಳು;

(ix) "ಎಂವೈಟಿ" ಎಂದರೆ ಬಹುವರ್ಷ ದರ;

(x) 2003ರ ವಿದ್ಯುಚ್ಛಕ್ತಿ ಅಧಿನಿಯಮ (2003ರ ಕೇಂದ್ರ ಅಧಿನಿಯಮ 36)ರಲ್ಲಿ ಪರಿಭಾಷಿಸಿದ್ದು, ಇಲ್ಲಿ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು 2003ರ ವಿದ್ಯುಚ್ಛಕ್ತಿ ಅಧಿನಿಯಮದಲ್ಲಿ ಪರಿಭಾಷಿಸಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಡಿಎಸ್ಎಂನ ಉದ್ದೇಶಗಳು.–**

ಕರ್ನಾಟಕ ರಾಜ್ಯಕ್ಕೆ ಡಿಎಸ್ಎಂನ ಉದ್ದೇಶಗಳು ಮುಂದಿನಂತೆ ಇರತಕ್ಕದ್ದು:

(i) ವಿದ್ಯುಚ್ಛಕ್ತಿಯ ಉಳಿತಾಯ ಮತ್ತು ಅದರ ದಕ್ಷ ಬಳಕೆಯಿಂದ ವಿದ್ಯುತ್ ಗರಿಷ್ಠ ಬೇಡಿಕೆಯ (ಪೀಕ್‌ಲೋಡ್) ಮತ್ತು ವಿದ್ಯುಚ್ಛಕ್ತಿ ಕೊರತೆಗಳನ್ನು ನೀಗಿಸುವುದು;

(ii) ಇಂಗಲಾಮ್ಲ ಅನಿಲ (ಗ್ರೀನ್ ಹೌಸ್ ಗ್ಯಾಸ್) ಕಾರಿಕೆಯನ್ನು ತಗ್ಗಿಸುವುದು; ಮತ್ತು

(iii) ವಿರಳವಾದ ಸಾಂಪ್ರದಾಯಿಕ ಇಂಧನ ಮೂಲಗಳ ಸಂರಕ್ಷಣೆ.

**4. ಡಿಎಸ್ಎಂನ ಗುರಿಗಳು.–**

ಮೇಲಿನ ವಿನಿಯಮ 3ರಲ್ಲಿ ಅನುಸೂಚಿಸಿರುವ ಉದ್ದೇಶಗಳ ಈಡೇರಿಕೆಗಾಗಿ ಆಯೋಗವು, ಯಾವುದೇ ಅಥವಾ ಪ್ರತಿ ವಿದ್ಯುತ್ ಸರಬರಾಜು ಪರವಾನಿಗೆದಾರನಿಗೆ, ಆದೇಶದ ಮುಖಾಂತರ ವಿದ್ಯುಚ್ಛಕ್ತಿ ಮತ್ತು ವಿದ್ಯುತ್ ಗರಿಷ್ಠ ಬೇಡಿಕೆಗಳ ಉಳಿತಾಯದ ವರ್ಷವಾರು ಗುರಿಗಳನ್ನು ವಿದ್ಯುತ್ ಸರಬರಾಜು ಪರವಾನಗಿದಾರ ಸಲ್ಲಿಸಿದ ಡಿಎಸ್ಎಂ ಯೋಜನೆ ಆಧಾರದ ಮೇಲೆ ಅನುಸೂಚಿಸತಕ್ಕದ್ದು.

5. **ಡಿಎಸ್‌ಎಂ ಸೆಲ್, ಅದರ ಪಾತ್ರಗಳು ಮತ್ತು ಜವಾಬ್ದಾರಿಗಳು.–**

(1) ಈ ವಿನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ತಿಂಗಳ ಒಳಗಾಗಿ, ಡಿಎಸ್‌ಎಂ ಅಥವಾ ಇಂಧನ ದಕ್ಷತೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮತ್ತು ಗುರಿಗಳನ್ನು ಸಾಧಿಸಲು ಪ್ರತೀ ಸರಬರಾಜು ಪರವಾನಿಗೆದಾರನು ಒಂದು ಡಿಎಸ್‌ಎಂ ಸೆಲ್ ಸ್ಥಾಪಿಸತಕ್ಕದ್ದು.

(2) ಹೀಗೆ ಸ್ಥಾಪಿತವಾದ ಡಿಎಸ್‌ಎಂ ಸೆಲ್ ಈ ವಿನಿಯಮಗಳಡಿಯಲ್ಲಿ ಸೂಚಿಸಿರುವ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸಲು ಆಯೋಗದ ಪೂರ್ವಾನುಮೋದನೆಯೊಂದಿಗೆ ಅಗತ್ಯವಾದ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಹೊಂದಿರತಕ್ಕದ್ದು.

(3) ಡಿಎಸ್‌ಎಂ ಸೆಲ್ ಮುಂದಿನದಕ್ಕೆ ಹೊಣೆಯಾಗಿರತಕ್ಕದ್ದು:

(i) ವಿದ್ಯುತ್ ಸರಬರಾಜು ಪರವಾನಗಿದಾರನ ಕಾರ್ಯಚಟುವಟಿಕೆಯ ವ್ಯಾಪ್ತಿ ಪ್ರದೇಶದಲ್ಲಿ, ಡಿಎಸ್‌ಎಂ ಅಥವಾ ಇಂಧನ ದಕ್ಷತೆ ಕಾರ್ಯಕ್ರಮಗಳ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಯ  ನಿರ್ಧರಣೆ;

**ವಿವರಣೆ:**

(ಎ) ಈ ವಿನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಪ್ರತಿ ಸರಬರಾಜು ಪರವಾನಿಗೆದಾರನು, ತನ್ನ ಕಾರ್ಯಾಚರಣೆಯ ವ್ಯಾಪ್ತಿ ಪ್ರದೇಶದಲ್ಲಿ ಡಿಎಸ್‌ಎಂನ ತಾಂತ್ರಿಕ ಸಾಧ್ಯತೆ ನಿರ್ಧರಿಸಲು ಒಂದು ಸಾಮಾನ್ಯ ವಿಧಾನವನ್ನು ಸೃಜಿಸಿ, ಆಯೋಗದ ಅನುಮೋದನೆಗೆ ಸಲ್ಲಿಸತಕ್ಕದ್ದು.

(ಬಿ) ಪ್ರತಿ ಎಂವೈಟಿಯ ನಿಯಂತ್ರಣ ಅವಧಿ ಪ್ರಾರಂಭವಾಗುವ ಒಂದು ವರ್ಷದ ಮುಂಚೆ ರಾಜ್ಯದಲ್ಲಿನ ಪ್ರತಿ ಸರಬರಾಜು ಪರವಾನಿಗೆದಾರನು ತನ್ನ ವಿತರಣಾ ವ್ಯಾಪ್ತಿ ಪ್ರದೇಶದಲ್ಲಿ ಡಿಎಸ್‌ಎಂ ಸಾಧ್ಯತೆಯ ನಿರ್ಧರಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ಡಿಎಸ್‌ಎಂನ ತಾಂತ್ರಿಕ ಸಾಧ್ಯತೆಯ ಮೊದಲ ನಿರ್ಧರಣೆಯನ್ನು ಈ ವಿನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಕೈಗೊಳ್ಳತಕ್ಕದ್ದು.

(ii) ಡಿಎಸ್‌ಎಂ ಕಾರ್ಯಕ್ರಮಗಳ ಉದ್ದೇಶಿತ ಗ್ರಾಹಕ ವರ್ಗ ಅಥವಾ ವರ್ಗಗಳನ್ನು ಮತ್ತು ಅಂತಿಮ ಉಪಯೋಗಗಳನ್ನು ಗುರುತಿಸಲು ಹಾಗೂ ಅಗತ್ಯವಾದ ದತ್ತ ಸಂಚಯ (ಡೇಟಾಬೇಸ್) ಸಿದ್ಧಪಡಿಸುವುದು;

(iii) ನಿರ್ದಿಷ್ಟ ಇಂಧನ ದಕ್ಷತೆ ತಂತ್ರಜ್ಞಾನಗಳ ಮತ್ತು ಉಪಯೋಗಗಳ ಮಾರುಕಟ್ಟೆ ಸಂಭಾವ್ಯತೆ ಅಂದಾಜಿಸಲು ಗ್ರಾಹಕ ಮತ್ತು ಮಾರುಕಟ್ಟೆ ಸಮೀಕ್ಷೆಗಳನ್ನು ನಡೆಸುವುದು, ಪ್ರಮುಖ ಕಾರ್ಯನಿರ್ವಹಣೆ ಸೂಚಕಗಳನ್ನು ನಿಯಮಿಸುವುದು ಮತ್ತು ಪ್ರಸ್ತುತ ಮೂಲಾಧಾರ (ಬೇಸ್‌ಲೈನ್) ಮಾರುಕಟ್ಟೆ ಸ್ಥಿತಿಗಳನ್ನು ನಿರ್ಧರಿಸುವುದು;

(iv) ಲೋಡ್ ಮತ್ತು ಮಾರುಕಟ್ಟೆ ಸಂಶೋಧನೆ ಫಲಿತಾಂಶದ ಆಧಾರದ ಮೇಲೆ ಮೂಲಾಧಾರ (ಬೇಸ್‌ಲೈನ್) ಮಾಹಿತಿಯನ್ನು ಸಿದ್ಧಪಡಿಸುವುದು:

***ವಿವರಣೆ:*** ಪ್ರತಿ ಸರಬರಾಜು ಪರವಾನಗಿದಾರನು ತನ್ನ ವಿದ್ಯುತ್ ಪೂರೈಕೆ ಪ್ರದೇಶಕ್ಕೆ ಪೂರ್ಣ ಮೂಲಾಧಾರ (ಬೇಸ್‌ಲೈನ್) ಮಾಹಿತಿ ಸಿದ್ಧಪಡಿಸುವವರೆಗೆ, ಲಭ್ಯವಿರುವ ಮಾಹಿತಿ ಆಧಾರದ ಮೇಲೆ ಪ್ರಾರಂಭಿಕ ಡಿಎಸ್‌ಎಮ್ ಕಾರ್ಯಕ್ರಮಗಳನ್ನು ರಚಿಸುವುದು, ವಿಶದಪಡಿಸುವುದು ಮತ್ತು ಜಾರಿಗೊಳಿಸತಕ್ಕದ್ದು. ಅಂತಹ ಪ್ರಾರಂಭಿಕ ಡಿಎಸ್‌ಎಮ್ ಕಾರ್ಯಕ್ರಮಗಳ ರಚನೆಗೆ ಸರಬರಾಜು ಪರವಾನಿಗೆದಾರರಿಂದ ಪೂರ್ವಾಧಾರ ಮಾಹಿತಿಯ ಸಿದ್ಧತೆ ಪೂರ್ವಾಪೇಕ್ಷಿತವಲ್ಲ.

(v) ಸರಬರಾಜು ಪರವಾನಿಗೆದಾರನ ನೌಕರರಿಗೆ ಡಿಎಸ್‌ಎಂನಲ್ಲಿ ಸಾಮರ್ಥ್ಯವರ್ಧನೆ;

(vi) ಡಿಎಸ್‌ಎಂ ಅನ್ನು ಪ್ರಮುಖ ಸಂಪನ್ಮೂಲವಾಗಿ ಒಳಗೊಂಡಿರುವ ಸಂಯೋಜಿತ ಸಂಪನ್ಮೂಲ ಯೋಜನೆಗೆ ಮಾಹಿತಿ ಒದಗಿಸುವುದು;

(vii) ಡಿಎಸ್‌ಎಂ ಯೋಜನೆಗಳ ರೂಪಿಸುವಿಕೆ;

(viii) ವೆಚ್ಚಕ್ಕೆ ತಕ್ಕ ಪ್ರಯೋಜನ ವಿಶ್ಲೇಷಣೆ, ಅನುಷ್ಠಾನಕ್ಕಾಗಿ ಯೋಜನೆಗಳು, ಮೇಲ್ವಿಚಾರಣೆ ಮತ್ತು ವರದಿ ಹಾಗೂ ಮಾಪನ ಮತ್ತು ಪರಿಶೀಲನೆ ಸೇರಿದಂತೆ ಡಿಎಸ್‌ಎಂ ಯೋಜನೆಗಳ ವಿನ್ಯಾಸ ಮತ್ತು ರಚನೆ;

(ix) ಡಿಎಸ್‌ಎಂ ಯೋಜನೆಗಳಿಗೆ ಮತ್ತು ಪ್ರತ್ಯೇಕ ಕಾರ್ಯಕ್ರಮಗಳಿಗೆ ಅಗತ್ಯ ಅನುಮೋದನೆ ಕೋರುವುದು;

(x) ಡಿಎಸ್‌ಎಂ ಕಾರ್ಯಕ್ರಮಗಳ ಅನುಷ್ಠಾನ;

(xi) ಆಯೋಗವು ನಿರ್ದೇಶಿಸಿದಂತೆ ವರದಿ ಸಲ್ಲಿಕೆಯ ಅವಶ್ಯಕತೆಗಳ ಪೂರೈಸುವಿಕೆ;

(xii) ಡಿಎಸ್‌ಎಂ ಕಾರ್ಯಕ್ರಮ ಹಂತದ ಮೌಲ್ಯನಿರ್ಣಯ, ಮಾಪನ ಮತ್ತು ಪರಿಶೀಲನೆಯ ಕಾರ್ಯನಿರ್ವಹಣೆ;

(xiii) ಗ್ರಾಹಕ ಜಾಗೃತಿ ಮತ್ತು ಶಿಕ್ಷಣ ಅಭಿವೃದ್ಧಿ ಪಡಿಸುವುದು; ಮತ್ತು

(xiv) ಕಾಲಕಾಲಕ್ಕೆ ಆಯೋಗದಿಂದ ನಿಯೋಜಿಸಿದ ಇತರೆ ಯಾವುದೇ ಹೆಚ್ಚುವರಿ ಕರ್ತವ್ಯ.

(4) ಇಂಧನ ದಕ್ಷತಾ ಬ್ಯೂರೋ ತನ್ನ ಮುನ್ನೋಟ ಯೋಜನೆಯಡಿಯಲ್ಲಿ ರೂಪಿಸಿದ ಯಾವುದೇ ಸಮಂಜಸವಾದ ಡಿಎಸ್‌ಎಂ ಕಾರ್ಯಕ್ರಮವನ್ನು (ಬಹು ರಾಜ್ಯ ಕಾರ್ಯಕ್ರಮವೂ ಸೇರಿ), ಬ್ಯೂರೋದಿಂದ ಯಾವಾಗ ಅಂತಹ ಕಾರ್ಯಕ್ರಮಗಳ ಘೋಷಣೆಯಾಗುತ್ತೋ ಆಗ, ಸರಬರಾಜು ಪರವಾನಿಗೆದಾರನು ಅಂತಹ ಡಿಎಸ್‌ಎಂ ಕಾರ್ಯಕ್ರಮಗಳನ್ನು ಸೇರಿಸಿಕೊಳ್ಳಬಹುದು.

(5) ಡಿಎಸ್‌ಎಂ ಕಾರ್ಯಕ್ರಮವು ಗ್ರಾಮ ಮತ್ತು ಪಂಚಾಯಿತಿ ಹಂತದ ಕುಡಿಯುವ ನೀರಿನ ಯೋಜನೆಗಳಲ್ಲಿ ವಿದ್ಯುಚ್ಛಕ್ತಿಯ ದಕ್ಷ ಬಳಕೆಗೆ ಉಪಕರಣಗಳು, ಬೀದಿದೀಪಗಳ ಹೊಸಜೋಡಣೆ / ಸ್ವಯಂ ಚಾಲನೆ, ಕೃಷಿ ವಿದ್ಯುಚ್ಛಕ್ತಿ ಉಪಯೋಗದ ಸಂಶೋಧನೆ ಅಥವಾ ಅಭಿವೃದ್ಧಿ, ಜಲ ಅಥವಾ ಇಂಧನ ಸಂರಕ್ಷಣೆ ಪ್ರಚುರ ಪಡಿಸುವ ಯೋಜನೆಗಳ ಪ್ರದರ್ಶನ, ಮನೆಗಳಿಗೆ ಎಲ್‌ಇಡಿ ದೀಪವ್ಯವಸ್ಥೆ ಮತ್ತು ಸೀಲಿಂಗ್ ಫ್ಯಾನ್‌ಗಳ ಬದಲಾವಣೆ ಕಾರ್ಯಕ್ರಮಗಳು, ಇಂಧನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ, ಸಾಮರ್ಥ್ಯ ವೃದ್ಧಿಸುವ ಉಪಕ್ರಮಗಳು, ಜಾಗೃತಿ ಶಿಬಿರಗಳು, ಅಂತಿಮ ಬಳಕೆಗಳಲ್ಲಿ ವಿದ್ಯುಚ್ಛಕ್ತಿ ಪಡೆಯುವುದಕ್ಕೆ ಸಂಬಂಧಿತ ಸೌರ ಪಿ.ವಿ. ಸಾಧನಗಳು, ಸೌರಶಕ್ತಿ ಪಂಪುಗಳು ಮತ್ತು ಸೌರಶಕ್ತಿ ಬೀದಿದೀಪ ವ್ಯವಸ್ಥೆಗಳು ಮತ್ತು ಆಯೋಗದಿಂದ ಅನುಮೋದನೆಗೊಂಡ ಯಾವುದೇ ಇತರೆ ಕಾರ್ಯಕ್ರಮಗಳನ್ನು ಒಳಗೊಂಡಿರತಕ್ಕದ್ದು.

(6) ಸರಬರಾಜು ಪರವಾನಿಗೆದಾರನು ತಾನೇ ಸ್ವಂತವಾಗಿ ಅಥವಾ ಇಂಧನ ದಕ್ಷತೆ ಬ್ಯೂರೋದಲ್ಲಿ ದಾಖಲಿಸಲ್ಪಟ್ಟ (empaneled) ಇಂಧನ ಸೇವಾ ಕಂಪನಿಗಳ (ESCOS) ಮುಖಾಂತರ, ಡಿಎಸ್‌ಎಂ ಕಾರ್ಯಕ್ರಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(7) ಪ್ರತಿ ಸರಬರಾಜು ಪರವಾನಿಗೆದಾರನು, ಮುನ್ನೋಟ ಯೋಜನೆಗೆ ಅಸಮಂಜಸವಲ್ಲದ, ಉರುಳು (ರೋಲಿಂಗ್) ಆಧಾರದ ಮೇಲೆ, ಮುಂಬರುವ ಆರ್ಥಿಕ ವರ್ಷಕ್ಕೆ ತ್ರೈಮಾಸಿಕ ಗುರಿಗಳೊಂದಿಗೆ ವಾರ್ಷಿಕ ಡಿಎಸ್‌ಎಂ ಯೋಜನೆಯನ್ನು (ಭೌತಿಕ ಮತ್ತು ಹಣಕಾಸು ಎರಡನ್ನೂ) ಹಿಂದಿನ ಆರ್ಥಿಕ ವರ್ಷದ 30ನೇ ನವೆಂಬರ್ ಒಳಗೆ ಆಯೋಗಕ್ಕೆ ಸಲ್ಲಿಸತಕ್ಕದ್ದು.

**6. ಸರಬರಾಜು ಪರವಾನಿಗೆದಾರರಿಂದ ಡಿಎಸ್‌ಎಂಗೆ ತಗಲಿದ ವೆಚ್ಚ ಹಿಂಪಡೆಯುವುದಕ್ಕೆ ವ್ಯವಸ್ಥೆ.–**

(1) ಪ್ರತಿ ಸರಬರಾಜು ಪರವಾನಿಗೆದಾರನು, ಡಿಎಸ್‌ಎಂ ಕಾರ್ಯಕ್ರಮಗಳ ಯೋಜನೆ, ವಿನ್ಯಾಸ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದೇ ವೆಚ್ಚಗಳು ಇದ್ದಲ್ಲಿ ಅವುಗಳನ್ನು ಗುರುತಿಸತಕ್ಕದ್ದು ಮತ್ತು ಅಂತಹ ವೆಚ್ಚಗಳನ್ನು ಹಿಂಪಡೆಯಲು, ದರ ರಚನೆ ಮುಖಾಂತರ ಹಣಕಾಸು ಒದಗಿಸಲು, ವಾರ್ಷಿಕ ಕಂದಾಯ ಅಗತ್ಯತೆಗೆ ಸೇರಿಸತಕ್ಕದ್ದು.

(2) ವೆಚ್ಚ ಹಿಂಪಡೆಯುವುದಕ್ಕೆ ಅರ್ಹತೆಯಾಗಲು ಪ್ರತಿ ಕಾರ್ಯಕ್ರಮ:

(i) ಅನುಷ್ಠಾನಕ್ಕೆ ಮುನ್ನ ಆಯೋಗದಿಂದ ಅನುಮೋದನೆಗೊಂಡಿರತಕ್ಕದ್ದು;

(ii) ಅನುಮೋದಿತ ಕಾರ್ಯಕ್ರಮ ಯೋಜನೆ ಪ್ರಕಾರ ಅನುಷ್ಠಾನಗೊಂಡಿರತಕ್ಕದ್ದು; ಮತ್ತು

(iii) ಮಿತವ್ಯಯದಲ್ಲಿ ಅನುಷ್ಠಾನಗೊಂಡಿರತಕ್ಕದ್ದು

**7. ಡಿಎಸ್‌ಎಂ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ವರದಿ ಸಲ್ಲಿಸುವಿಕೆ.–**

(1) ಕಾಲಕಾಲಕ್ಕೆ ಆಯೋಗವು ನಿರ್ದೇಶಿಸಿದಂತೆ, ಪ್ರತಿ ಸರಬರಾಜು ಪರವಾನಿಗೆದಾರನು, ಡಿಎಸ್‌ಎಂ ಅಥವಾ ಇಂಧನ ದಕ್ಷತೆ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಯೋಜನೆ ಸಿದ್ಧಪಡಿಸತಕ್ಕದ್ದು ಹಾಗೂ ಅಂತಹ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ವರದಿ ಸಲ್ಲಿಕೆ ಕಾರ್ಯ ಮಾಡತಕ್ಕದ್ದು.

(2) ಡಿಎಸ್‌ಎಂ ಯೋಜನೆಯ ಅನುಷ್ಠಾನದ ಪ್ರಗತಿ ಮತ್ತು ಅದರ ಅನುಷ್ಠಾನಕ್ಕೆ ತಗಲಿದ ವೆಚ್ಚಗಳ ಬಗ್ಗೆ, ಸರಬರಾಜು ಪರವಾನಿಗೆದಾರರು ಪ್ರತಿ ಆರು ತಿಂಗಳಿಗೊಮ್ಮೆ ಆಯೋಗಕ್ಕೆ ವರದಿ ಸಲ್ಲಿಸತಕ್ಕದ್ದು.

(3) ಸರಬರಾಜು ಪರವಾನಿಗೆದಾರನು, ಪ್ರತಿ ಡಿಎಸ್‌ಎಂ ಕಾರ್ಯಕ್ರಮ ಮುಕ್ತಾಯವಾದ ಒಂದು ತಿಂಗಳೊಳಗಾಗಿ ಕಾರ್ಯಕ್ರಮದ ವೆಚ್ಚಗಳು, ಸಾಧನೆಗಳು, ಪರಿಣಾಮಗಳು ಮತ್ತು ಫಲಿತಾಂಶಗಳು ಮತ್ತು ಎದುರಿಸಿದ ನಿರ್ಬಂಧಗಳು ಮತ್ತು ಅಡಚಣೆಗಳು, ತೀರ್ಮಾನಗಳು, ಶಿಫಾರಸ್ಸುಗಳು, ಕಲಿತ ಪಾಠಗಳು ಮತ್ತು ಮುಂದಿನ ದಾರಿ ಸೇರಿದಂತೆ ವಿವರವಾದ ಮುಕ್ತಾಯ ವರದಿಯನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.

**8. ಡಿಎಸ್‌ಎಂ ಕಾರ್ಯಕ್ರಮಗಳ ಮೌಲ್ಯ ನಿರ್ಣಯ, ಮಾಪನ ಮತ್ತು ಪರಿಶೀಲನೆ.–**

(1) ಆಯೋಗವು ಅನುಮೋದಿಸಿದ ರೀತಿಯಂತೆ, ಡಿಎಸ್‌ಎಂ ಕಾರ್ಯಕ್ರಮದಿಂದ ಆದ ಉಳಿತಾಯದ ಮೌಲ್ಯನಿರ್ಣಯ, ಮಾಪನ ಮತ್ತು ಪರಿಶೀಲನೆಗೆ ಸರಬರಾಜು ಪರವಾನಿಗೆದಾರನು ಜವಾಬ್ದಾರಿಯಾಗಿರತಕ್ಕದ್ದು.

(2) ಡಿಎಸ್‌ಎಂ ಕಾರ್ಯಕ್ರಮದಿಂದ ಆದ ಉಳಿತಾಯವನ್ನು ಪರಿಶೀಲಿಸಲು, ಸರಬರಾಜು ಪರವಾನಿಗೆದಾರನು, ಆಯೋಗಕ್ಕೆ ಅಥವಾ ಆಯೋಗವು ಸೂಚಿಸಿದ ಯಾವುದೇ ಮೂರನೇ ವ್ಯಕ್ತಿಗೆ, ಅಗತ್ಯ ಮಾಹಿತಿ ಮತ್ತು ವಿವರಗಳನ್ನು ಒದಗಿಸತಕ್ಕದ್ದು.

**9. ಗುರಿಗಳನ್ನು ಸಾಧನೆಯಾಗದಿರುವುದು.–**

ಯಾವುದೇ ಸರಬರಾಜು ಪರವಾನಿಗೆದಾರನು ಆಯೋಗವು ನಿಗದಿ ಮಾಡಿದ, ಡಿಎಸ್ಎಂ ಗುರಿಗಳನ್ನು ಮತ್ತು ಅದರಂತೆ ನಿರೀಕ್ಷಿಸಿದ ಉಳಿತಾಯ ಸಾಧಿಸದಿದ್ದಲ್ಲಿ ಅಥವಾ ಅನುಮೋದಿತ ಯೋಜನೆ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿಫಲವಾದಲ್ಲಿ, ಆಯೋಗವು ಇದರ ಬಾಬ್ತು ತಗುಲಿದ ಯಾವುದೇ ವೆಚ್ಚವನ್ನು ನಿರಾಕರಿಸತಕ್ಕದ್ದು.

**10. ತಿದ್ದುಪಡಿಗೆ ಅಧಿಕಾರ.–**

ಆಯೋಗವು ಎಲ್ಲಾ ಭಾದಿತ ವ್ಯಕ್ತಿಗಳಿಗೆ ಅವರನ್ನು ಕೇಳಲ್ಪಡುವ ಅವಕಾಶ ಕಲ್ಪಿಸುವ ಪ್ರಕ್ರಿಯೆಯನ್ನು ಅನುಸರಿಸಿ, ಸ್ವಯಂಪ್ರೇರಿತವಾಗಿಯೋ ಅಥವಾ ಪರವಾನಿಗೆದಾರನ ಅಥವಾ ಯಾವುದೇ ಗ್ರಾಹಕನ ಅರ್ಜಿಯ ಮೇರೆಗೆ, ಯಾವುದೇ ಸಂದರ್ಭದಲ್ಲಿ ಈ ವಿನಿಯಮಗಳ ಯಾವುದೇ ಉಪಬಂಧಗಳಿಗೆ, ಸೇರ್ಪಡೆ, ವ್ಯತ್ಯಾಸ, ಬದಲಾವಣೆ, ಮಾರ್ಪಾಟು ಅಥವಾ ತಿದ್ದುಪಡಿ ಮಾಡಬಹುದು.

**11. ಉಳಿಸುವಿಕೆಗಳು.–**

(1) ಈ ವಿನಿಯಮಗಳ ಯಾವುದೇ ಉಪಬಂಧ, ನ್ಯಾಯ ಒದಗಿಸುವ ಸಲುವಾಗಿ ಅಥವಾ ಆಯೋಗದ ಪ್ರಕ್ರಿಯೆಯ ದುರುಪಯೋಗ ತಪ್ಪಿಸಲು ಯಾವುದೇ ಅಗತ್ಯ ಆದೇಶಗಳನ್ನು ಹೊರಡಿಸುವಲ್ಲಿ ಆಯೋಗದ ಅಂತರ್ಗತ ಅಧಿಕಾರವನ್ನು ಮಿತಿಗೊಳಿಸತಕ್ಕದ್ದಲ್ಲ ಅಥವಾ ಭಂಗ ಮಾಡತಕ್ಕದ್ದಲ್ಲ.

(2) ಅಧಿನಿಯಮದ ಉಪಬಂಧಗಳ ಅನುರೂಪವಾಗಿ, ಈ ವಿನಿಯಮಗಳಲ್ಲಿನ ಯಾವುದೇ ಉಪಬಂಧಗಳ ವ್ಯತಿರಿಕ್ತವಾಗಿದ್ದರೂ ಆಯೋಗವು, ಯಾವುದೇ ವಿಷಯದಲ್ಲಿ ಅಥವಾ ವಿಷಯಗಳ ವರ್ಗದಲ್ಲಿ ವಿಶೇಷ ಸಂದರ್ಭಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಕಾರಣಗಳನ್ನು ಬರವಣಿಗೆಯಲ್ಲಿ ದಾಖಲಿಸುವುದರೊಂದಿಗೆ, ಅಂತಹ ವಿಷಯವನ್ನು ಅಥವಾ ವಿಷಯಗಳ ವರ್ಗವನ್ನು ತ್ವರಿತವಾಗಿ ನಿಭಾಯಿಸಲು, ಒಂದು ಕಾರ್ಯ ವಿಧಾನವನ್ನು ಅನುಸರಿಸಲು, ಈ ವಿನಿಯಮಗಳ ಯಾವುದೇ ಉಪಬಂಧ ಆಯೋಗವನ್ನು ಪ್ರತಿಬಂಧಿಸತಕ್ಕದ್ದಲ್ಲ.

(3) ಆಯೋಗವು, ಅಧಿನಿಯಮದಡಿ ವಿನಿಯಮಗಳನ್ನು ರಚಿಸಲಾಗದ ಯಾವುದೇ ವಿಷಯವನ್ನು ನಿಭಾಯಿಸಲು ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು, ಈ ವಿನಿಯಮಗಳ ಯಾವುದೇ ಉಪಬಂಧ ಸ್ಪಷ್ಟವಾಗಿ ಅಥವಾ ಸೂಚ್ಯವಾಗಿ ಆಯೋಗವನ್ನು ಪ್ರತಿಭಂದಿಸತಕ್ಕದ್ದಲ್ಲ, ಮತ್ತು ಆಯೋಗವು, ಅಂತಹ ವಿಷಯ, ಅಧಿಕಾರ ಮತ್ತು ಕರ್ತವ್ಯಗಳನ್ನು ತನಗೆ ಸರಿಯೆಂದ ವಿಧಾನದಲ್ಲಿ ನಿಭಾಯಿಸಬಹುದು.

ಆಯೋಗದಿಂದ ಅನುಮೋದನೆಗೊಂಡಿದೆ.

ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ